ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ /ಶೈಶಾ/ಸ್ಕಾ.ವಿ.ಆಪ್/2019-20

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ:01/10/2020.

## ಸುತ್ತೋಲೆ

ವಿಷಯ: ರಾಜ್ಯದ ದ್ವಿತೀಯ ಪಿಯುಸಿ (ವಿಜ್ಞಾನ) ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ Online Theory Classes (2D & 3D Animation) ಹಾಗೂ KCET, NEET,IIT-JEE ಮತ್ತು ಇತರೆ ಪ್ರವೇಶ ಪರೀಕ್ಷೆಗಳಿಗೆ "Scholars wing" App ಮೂಲಕ ಉಚಿತ Online ತರಬೇತಿ ಪಡೆಯಲು ಕ್ರಮಕೈಗೊಳ್ಳುವ ಬಗ್ಗೆ.

ಉಲ್ಲೇಖ: ಸರ್ಕಾರದ ಸಮ ಪತ್ರ ಸಂಖ್ಯೆ: ದಿನಾಂಕ 09/06/2020 ಮತ್ತು 15/07/2020 ಇಪಿ 61 ಎಂ.ಹೆಚ್.ಟಿ 2020.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕೋವಿಡ್-19 ನಿಂದ ಶಾಲಾ ಕಾಲೇಜುಗಳು ನಡೆಸದಿರುವ ಕಾರಣ ದ್ವಿತೀಯ ಪಿಯುಸಿ (ವಿಜ್ಞಾನ) ವಿಭಾಗದಲ್ಲಿನ ವಿದ್ಯಾರ್ಥಿಗಳಿಗೆ Online Theory Classes (2D & 3D Animation) ಹಾಗೂ KCET, NEET,IIT- JEE ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಲು ಅನುಕೂಲವಾಗುವಂತೆ Colorstonz Creative Studios LLP Bangalore ಸಂಸ್ಥೆಯವರು ಸಿದ್ಧಪಡಿಸಿರುವ Preloaded Content ನ್ನು "Scholars wing"App ಮುಖಾಂತರ ಒಂದು ವರ್ಷದ ಅವಧಿಗೆ ಉಚಿತವಾಗಿ ನೀಡಲು ಮುಂದೆ ಬಂದಿರುತ್ತಾರೆ. ಪ.ಪೂ.ಶಿ ಇಲಾಖೆ "Scholars wing"App ನ್ನು ವಿಷಯ ತಜ್ಞರಿಂದ ಮೌಲ್ಯಮಾಪನ ಮಾಡಿಸಿದ್ದು, ಸದರಿ App ನಲ್ಲಿರುವ ಪಠ್ಯ, ಪಠ್ಯ ನಿರೂಪಣೆ, ಅಗತ್ಯತೆ ಸೂಕ್ತತೆ, ಬಳಸಿದ ಭಾಷೆ, ಬಳಸಲಾಗಿರುವ 2D & 3D ಅನಿಮೇಷನ್‌ಗಳು ಸೂಕ್ತವಾಗಿದ್ದು ಮತ್ತು ಪಠ್ಯಕ್ಕೆ ಸಂಬಂಧಿಸಿದಮೂರು ಹಂತದ ಆಯ್ಕೆ ಪ್ರಶ್ನೆಗಳು ಹಾಗೂ ಅವುಗಳ ವಿಡಿಯೋ ವಿವರಣೆ ಲಭ್ಯವಿರುತ್ತದೆ. ಅಲ್ಲದೆ ಸ್ಪರ್ಧಾತ್ಮಕ ಪರೀಕ್ಷೆಗಳಾದ KCET, NEET,IIT- JEE ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ಣ ಮಾಹಿತಿಯನ್ನೊಳಗೊಂಡಿರುತ್ತದೆ. ಆದ್ದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಸದರಿ ವಿಷಯದ ಬಗ್ಗೆ Colorstonz Creative Studios LLP ಸಂಸ್ಥೆಯವರೊಂದಿಗೆ, ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಒಡಂಬಡಿಕೆ ಮಾಡಿಕೊಂಡ ದಿನದಿಂದ ಒಂದು ವರ್ಷ ಉಚಿತವಾಗಿ ತರಬೇತಿ ನೀಡುವ ಷರತ್ತಿಗೊಳಪಟ್ಟು ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದೆ.

ಆದ್ದರಿಂದ ಪದವಿ ಪೂರ್ವ ಶಿಕ್ಷಣ ವ್ಯಾಪ್ತಿಯ ಎಲ್ಲಾ ಪ್ರಾಂಶುಪಾಲರು, ಉಪನ್ಯಾಸಕರು ಮೊದಲು "Scholars wing"App ನ್ನು Play Store ನಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ನಂತರ ಜಿಲ್ಲೆಯಲ್ಲಿನ ಸರ್ಕಾರಿ ಮತ್ತು ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ (ವಿಜ್ಞಾನ ವಿಭಾಗ) ಉಚಿತವಾಗಿ pre-loaded (24X7) ಮುಖಾಂತರ ತರಬೇತಿ ಪಡೆಯಲು "Scholars wing"App ನ್ನು ವಿದ್ಯಾರ್ಥಿಗಳು ಹೊಂದಿರುವ Mobil phone or Tab or computer ನಲ್ಲಿ Play Store ನಿಂದ Download ಮಾಡಿಕೊಂಡು ಪಠ್ಯ ವಿಷಯ ಅಭ್ಯಾಸ ಮಾಡಲು ತುರ್ತಾಗಿ ತಿಳಿಸತಕ್ಕದ್ದು.

6. ಈ ತರಬೇತಿಯನ್ನು ಸಂಸ್ಥೆಯ ವೆಚ್ಚದಲ್ಲಿಯೇ ಉಚಿತವಾಗಿ ನೀಡುವ ಸಂಪೂರ್ಣ ಜವಾಬ್ದಾರಿಯು ಸಂಸ್ಥೆಗೆ ಸೇರಿರುತ್ತದೆ.
7. ತರಬೇತಿಗೆ ನಿಯೋಜಿಸಲ್ಪಡುವ ವಿದ್ಯಾರ್ಥಿಗಳ ವೈಯುಕ್ತಿಕ ಮಾಹಿತಿಗಳನ್ನು ಸಂಸ್ಥೆಯು ಪಡೆಯುವಂತಿಲ್ಲ.
8. ಆಪ್‌ನ ಬಳಕೆ ಸಂಪೂರ್ಣವಾಗಿ ಉಚಿತವಾಗಿ ನೀಡಬೇಕಾಗಿದ್ದು, ನಂತರದ ಹಂತಗಳಲ್ಲಿ ಇಲಾಖೆಯಿಂದಾಗಲೀ ಅಥವಾ ವಿದ್ಯಾರ್ಥಿಗಳಿಂದ ಯಾವುದೆ ಪರೋಕ್ಷವಾಗಿ ಶುಲ್ಕವನ್ನು ಸಂಸ್ಥೆಯು ಪಡಯುವಂತಿಲ್ಲ.
9. ವಿದ್ಯಾರ್ಥಿಗಳ ಕಾಲೇಜು ಅವಧಿಯ ನಂತರ ತರಬೇತಿ ಅವಧಿಯನ್ನು ನಿಗದಿಗೊಳಿಸಿ, ಕಾಲೇಜಿನ ಪಾಠ ಪ್ರವಚನಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲು ಸಂಸ್ಥೆ ಹಾಗೂ ಅಧಿಕಾರಿಗಳು ಸಮನ್ವಯದೊಂದಿಗೆ ಕ್ರಮವಹಿಸುವುದು.
10. ವಿದ್ಯಾರ್ಥಿಗಳ ಜ್ಞಾನಾರ್ಜನೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉತ್ತಮ ತಯಾರಿಗಾಗಿ ಘನ ಸರ್ಕಾರವು ಪದವಿ ಪೂರ್ವ ಶಿಕ್ಷಣ ಇಲಾಖೆಯು ಈ ಸಂಸ್ಥೆಯ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ನೀಡುವ ಈ ತರಬೇತಿ ಯಶಸ್ವಿಯಾಗಿ ನಡೆಯಲು ಕ್ರಮ ವಹಿಸುವುದು.

ಈ ಸಂಬಂಧ ನೋಡಲ್ ಅಧಿಕಾರಿಗಳನ್ನಾಗಿ ಶೈಕ್ಷಣಿಕ ಶಾಖೆಯ ಉಪ ನಿರ್ದೇಶಕರನ್ನು ಮಾಡಲಾಗಿದೆ. ತಾಂತ್ರಿಕ ವಿಷಯಗಳನ್ನು ಅವಲೋಕಿಸಲು Colorstonz Creative Studios LLP Bangalore ಸಂಸ್ಥೆಯವರು ಇ-ಆಡಳಿತ ಶಾಖೆಯ ಸಹಾಯಕ ನಿರ್ದೇಶಕರ ಮಾರ್ಗದರ್ಶನ ಪಡೆಯಲು ಸೂಚಿಸಿದೆ. ಶೈಕ್ಷಣಿಕ ಶಾಖೆಯ ಉಪ ನಿರ್ದೇಶಕರು ಹಾಗೂ ಇ-ಆಡಳಿತ ಶಾಖೆಯ ಸಹಾಯಕ ನಿರ್ದೇಶಕರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಲು ತಿಳಿಸಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಿದೆ. ಕ್ರಮ ವಹಿಸಿದ ಬಗ್ಗೆ ಕೇಂದ್ರ ಕಛೇರಿಗೆ ಆಗಿಂದಾಗೆ ಮಾಹಿತಿ ನೀಡಲು ಸೂಚಿಸಿದೆ.

**ಟಿಪ್ಪಣಿ ಮಾನ್ಯ ನಿರ್ದೇಶಕರಿಂದ ಅನುಮೋದಿಸ್ಪಟ್ಟಿದೆ.**

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

4. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಜಿಲ್ಲಾ ಉಪ ನಿರ್ದೇಶಕರುಗಳ ಇ-ಮೇಲ್‌ಗೆ ಅಳವಡಿಸಲು.
6. ಕಛೇರಿ ಪ್ರತಿ.